- Bullock cart ride, rural folk games such as Top spinning (buguri), Gillidandu, Skipping, Kuntebille, Ludo, Lagori, Running cycle tyre, Grand mother stories, Cup and Ball etc are organized for children to experience these games.

- Sports are organized for differently abled children and other children on both the days. Nearly 700 differently abled children are expected to participate in the sports event. Stage performance will also be given by the differently abled children.
- Activities such as drawing, quiz, story telling are also organised on 15.11.2015. Fancy dress & healthy baby show are being organised on 15.11.2015 for the children below 10 years.
- Health checkup camps in collaboration with health department is organized for children who are participating in the programme. On both the days.
- Disney characters will be roaming in Cubbon park
- Exhibition stalls are organized by the sthree shakthi groups and also by various departments about children products, children materials and information about children programme. Two mobile vans of the Stree Shakthi groups will be there exhibiting products used for children.
- Demonstration by Anganawadi workersabout preparation of supplementary nutrition food.
- A book "Sampreethi- Santhrupti" collection of poems written by children residing in Children Homes run by the Department will be released on this occasion "Dhwani Suruli" an audio on department Programmes is organized to increase the awareness among the public.
- The Horticulture Department is organizing a grand flower show and BSF weapon and band show in the cubbon park.
- Approximately 10,000 to15,000 children are expected to participate in this programme .
- The BMTC has agreed to provide special buses on both days from all parts of Bangalore urban and rural district for the benefit of children and their parents.
- Action has been taken to provide space for parking vehicle for those who come in their own vehicle.
- Apart from Bangalore Urban the Children's Day is being organized all over the State and Districts as well as Taluk Level.
- The children's day will be celebrated at state, district and taluka level. Rural Develpement Panchayatraj Department is organising children's Gram sabha in all the Gram panchayat in the month of November 2015.

# ಮಕ್ಕಳ ದಿನಾಚರಣೆ ವಿವಿದ ಕಾರ್ಯಕ್ರಮಗಳು

**ಬೆಂಗಳೂರು, ಬೆಂಗಳೂರು, ನವೆಂಬರ್ 13 (ಕರ್ನಾಟಕ ವಾರ್ತೆ)**

ಪ್ರತಿ ವರ್ಷ ನವೆಂಬರ್ 14ರಂದು ಮಕ್ಕಳ ದಿನಾಚರಣೆಯನ್ನು ಆಚರಿಸಲಾಗುತ್ತದೆ. ಈ ವರ್ಷ ಮಕ್ಕಳ ದಿನಾಚರಣೆಯನ್ನು ದಿನಾಂಕ: 14–11–2015 ಮತ್ತು 15–11–2015ರಂದು ಆಚರಿಸಲಾಗುತ್ತಿದೆ. ದಿನಾಂಕ: 14–11–2015ರಂದು ಬೆಳಿಗ್ಗೆ 11.00 ಗಂಟೆಗೆ ಜವಾಹರ ಬಾಲಭವನ, ಕಬ್ಬನ್ ಉದ್ಯಾನವನ, ಬೆಂಗಳೂರು ಇಲ್ಲಿ ಕರ್ನಾಟಕದ ಗೌರವಾನ್ವಿತ ರಾಜ್ಯಪಾಲರು ಈ ಸಮಾರಂಭವನ್ನು ಉದ್ಘಾಟಿಸಲಿದ್ದಾರೆ. ಈ ಸಂದರ್ಭದಲ್ಲಿ ಕೆಳಕಂಡ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗುತ್ತದೆ.

**ಧೈರ್ಯ ಸಾಹಸ ಪ್ರದರ್ಶಿಸಿದ ಬಾಲಕರಿಗೆ ಹೊಯ್ಸಳ ಮತ್ತು ಬಾಲಕಿಯರಿಗೆ ಕೆಳದಿ ಚೆನ್ನಮ್ಮ ಶೌರ್ಯ ಪ್ರಶಸ್ತಿಗಳು**

ಪ್ರತಿ ವರ್ಷವೂ ಮಕ್ಕಳ ದಿನಾಚರಣೆ ಸಮಾರಂಭದಂದು ಧೈರ್ಯ ಸಾಹಸ ಪ್ರದರ್ಶಿಸಿ, ಸಮಯ ಪ್ರಜ್ಞೆಯಿಂದ ಇತರರ ಪ್ರಾಣವನ್ನು ಅಪಾಯದಿಂದ ರಕ್ಷಿಸಿದಂತಹ ಮಕ್ಕಳಿಗೆ ಶೌರ್ಯ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುತ್ತದೆ. 2015–16ನೇ ಸಾಲಿಗೆ ಈ ಕೆಳಕಂಡ ಮಕ್ಕಳನ್ನು ಹೊಯ್ಸಳ ಮತ್ತು ಕೆಳದಿ ಚೆನ್ನಮ್ಮ ಶೌರ್ಯ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಈ ಪ್ರಶಸ್ತಿಯು ರೂ.10,000/– ಗಳ ನಗದು, ನೆನಪಿನ ಕಾಣಿಕೆ, ಪ್ರಶಸ್ತಿ ಪತ್ರ ಮತ್ತು ಪದಕವನ್ನು ಒಳಗೊಂಡಿರುತ್ತದೆ.

| ಕ್ರ. ಸಂ | ಹೆಸರು ಮತ್ತು ವಿಳಾಸ | ಪ್ರಕರಣದ ವಿವರ |
|---|---|---|
| 1 | ಮಾ॥ ಸಿದ್ದೇಶ್ .ಎಂ<br>ತಂದೆ.<br>ಎನ್.ಬಿ.ಮಂಜುನಾಥ,<br>ಮಂಜುನಾಥ ದೇವಸ್ಥಾನದ ಹತ್ತಿರ, ಆವರಗೆರೆ,<br>ದಾವಣಗೆರೆ ಜಿಲ್ಲೆ.<br>25.04.2005 (10 ವರ್ಷ)<br>5ನೇ ತರಗತಿ | ದಾವಣಗೆರೆ ತಾಲ್ಲೂಕಿನ ಅವರೆಗೆರೆಯ 4ನೇ ತರಗತಿಯ ವಿದ್ಯಾರ್ಥಿ ಸಿದ್ದೇಶ್ ಎಂಬ ಬಾಲಕ ದಿನಾಂಕ:15.03.2015 ರಂದು ಅವರೆಗೆರೆ ಟೌನ್‌ಶಿಪ್ ಬಳಿ ರೈಲ್ವೆ ಹಳಿ ಬಿರುಕು ಬಿಟ್ಟಿರುವುದನ್ನು ಗಮನಿಸಿ, ಹರಿಹರ–ಚಿತ್ರದುರ್ಗ ಪ್ಯಾಸೆಂಜರ್ ರೈಲು ಬರುತ್ತಿರುವ ಸಂದರ್ಭದಲ್ಲಿ ತಾನು ಧರಿಸಿದ ಕೆಂಪು ಬಣ್ಣದ ಅಂಗಿಯನ್ನು ತೋರಿಸಿ, ಸಂಭವಿಸಬಹುದಾದ ಅನಾಹುತವನ್ನು ತಪ್ಪಿಸಿರುತ್ತಾನೆ. ಘಟನೆಯ ಬಗ್ಗೆ ಹಲವಾರು ದಿನಪತ್ರಿಕೆಗಳಲ್ಲಿ ಪ್ರಕಟಗೊಂಡಿರುತ್ತದೆ. |
| 2 | ಕು॥ ಸಿಯಾ ವಾಮನಸಾ ಖೋಡೆ,<br>ದಾಜಿಬಾನಪೇಟ, ಹುಬ್ಬಳ್ಳಿ<br>ಧಾರವಾಡ ಜಿಲ್ಲೆ. | ಕು॥ ಸಿಯಾ ವಾಮನಸಾ ಖೋಡೆ ದಿನಾಂಕ:14.04.2015ರ ಸಾಯಂಕಾಲ 6.00 ಗಂಟೆಗೆ ಮನೆಯ ಮೇಲ್ಛಾವಣಿಯಲ್ಲಿ ಆಟವಾಡುತ್ತಿದ್ದ ಇವರ 4 ವರ್ಷ ವಯಸ್ಸಿನ ತಮ್ಮನಾದ ಕುಮಾರ ಯಲ್ಲಪ್ಪ (ಯಶ) ಖೋಡೆ, ಇವರು ಆಕಸ್ಮಿಕವಾಗಿ ಕೆ.ಇ.ಬಿ ಕರೆಂಟ್ ವೈರ್‌ನ್ನು ಸ್ಪರ್ಶಿಸಿರುವ |

| | | |
|---|---|---|
| | 04.10.2004 (11 ವರ್ಷ) 6ನೇತರಗತಿ | ಸಂದರ್ಭದಲ್ಲಿ ಶಾಕ್ ಹೊಡೆದಾಗ ಕುಮಾರಿ ಸಿಯಾರವರ ಸಮಯ ಪ್ರಜ್ಞೆ ಮತ್ತು ಚಾಣಾಕ್ಷತೆಯಿಂದ ಕರೆಂಟ್ ವೈರನ್ನು ಸ್ಪರ್ಶಿಸಿದ್ದ ತಮ್ಮನ ಶರ್ಟ್ ಹಿಡಿದು ಎಳೆದಿರುವ ಪ್ರಯುಕ್ತ ಸಂಭವಿಸಬಹುದಾದ ಅನಾಹುತದಿಂದ ತಮ್ಮನನ್ನು ಪಾರು ಮಾಡಿರುತ್ತಾಳೆ. ಘಟನೆಯ ಬಗ್ಗೆ ಹಲವಾರು ದಿನಪತ್ರಿಕೆಗಳಲ್ಲಿ ಪ್ರಕಟಗೊಂಡಿರುತ್ತದೆ. |

## ಮಕ್ಕಳ ಕಲ್ಯಾಣ ಪ್ರಶಸ್ತಿಗಳು

ಕರ್ನಾಟಕ ರಾಜ್ಯದಲ್ಲಿ ಮಕ್ಕಳ ಕಲ್ಯಾಣ ಕ್ಷೇತ್ರದಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿದ ಸ್ವಯಂ ಸೇವಾ ಸಂಸ್ಥೆ ಮತ್ತು ವ್ಯಕ್ತಿಗಳ ಸೇವೆಯನ್ನು ಗುರುತಿಸಿ ಪ್ರತಿ ವರ್ಷ ರಾಜ್ಯ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುತ್ತಿದೆ. ಅದರಂತೆ 2015ನೇ ವರ್ಷದಲ್ಲಿ ಈ ಕೆಳಕಂಡ 4 ಸಂಸ್ಥೆಗಳು ಹಾಗೂ 4 ವ್ಯಕ್ತಿಗಳನ್ನು ಆಯ್ಕೆ ಮಾಡಲಾಗಿದ್ದು, ಇವರಿಗೆ ರಾಜ್ಯ ಪ್ರಶಸ್ತಿಯನ್ನು ದಿನಾಂಕ: 14.11.2015 ರಂದು ನಡೆಯುವ ಮಕ್ಕಳ ದಿನಾಚರಣೆಯ ಸಮಾರಂಭದಲ್ಲಿ ವಿತರಿಸಲಾಗುವುದು. ಸಂಘ-ಸಂಸ್ಥೆಗಳಿಗೆ ನೀಡುವ ಪ್ರಶಸ್ತಿಯು ರೂ.1.00 ಲಕ್ಷ ನಗದು ಬಹುಮಾನ ಹಾಗೂ ಪ್ರಶಸ್ತಿ ಪತ್ರ, ನೆನಪಿನ ಕಾಣಿಕೆ  ಮತ್ತು ವೈಯಕ್ತಿಕ ಪ್ರಶಸ್ತಿಯು ರೂ.25,000/- ನಗದು ಬಹುಮಾನ, ನೆನಪಿನ ಕಾಣಿಕೆ ಹಾಗೂ ಪ್ರಶಸ್ತಿ ಪತ್ರವನ್ನು ಒಳಗೊಂಡಿರುತ್ತದೆ.

### ಸಂಘ-ಸಂಸ್ಥೆ

| ಕ್ರ.ಸಂ | ಸಂಸ್ಥೆಯ ಹೆಸರು ಮತ್ತು ವಿಳಾಸ | ಸಾಧನೆ |
|---|---|---|
| 1 | ರಂಗ ಕಹಳೆ,<br>ನಂ.35, 2ನೇ ಮುಖ್ಯ ರಸ್ತೆ,<br>3ನೇ ಅಡ್ಡ ರಸ್ತೆ, ಬನಶಂಕರಿ 5ನೇ ಹಂತ, ಉತ್ತರ ಹಳ್ಳಿ,<br>ಬೆಂಗಳೂರು-560061 | ರಂಗಕಹಳೆ 1975 ರಲ್ಲಿ ಸ್ಥಾಪನೆಗೊಂಡಿದ್ದು, ಮಕ್ಕಳಲ್ಲಿ ಅಡಗಿರುವ ಕಲೆಯನ್ನು ಹೊರಹೊಮ್ಮಿಸಲು ಪ್ರಯತ್ನಿಸುತ್ತಿದೆ. ಸಂಸ್ಥೆಯು ಮಕ್ಕಳಿಗಾಗಿ ಹಲವಾರು ನಾಟಕಗಳನ್ನು ಮಾಡಿದೆ. ಈ ಸಂಸ್ಥೆಯು ಮಕ್ಕಳನ್ನು ತೊಡಗಿಸಿಕೊಂಡು ಹಲವಾರು ಪ್ರದರ್ಶನ ಮಾಡಿದೆ. ರಂಗಕಹಳೆ ತಂಡ ಹಲವಾರು ಪ್ರಶಸ್ತಿಗಳನ್ನು ಪಡೆದಿರುತ್ತದೆ. ಈ ಸಂಸ್ಥೆಯು ರಂಗತರಬೇತಿ ಶಿಬಿರಗಳನ್ನು ಭಾರತದಾದ್ಯಂತ ಆಯ್ದ ಭಾಷೆಗಳಲ್ಲಿ ಮತ್ತು ಬಹುವಾಗಿ ಕರ್ನಾಟಕ ರಾಜ್ಯದಲ್ಲಿ ಏರ್ಪಡಿಸುತ್ತಾ ಬಂದಿದೆ. ಸಂಸ್ಥೆಯು ಮಕ್ಕಳಿಗೆ ರಂಗ ಪ್ರದರ್ಶನಗಳ ಮೂಲಕ ಶಿಕ್ಷಣ ನೀಡುತ್ತಿದ್ದು, ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮರಳಿ ಶಾಲೆಗೆ ಸೇರಿಸಲು ಹಾಗೂ ಸಾಂಸ್ಕೃತಿಕ ಕ್ಷೇತ್ರಕ್ಕೆ ಸೇರಿಸಲು ಯಶಸ್ವಿಯಾಗಿದೆ. |
| 2 | ಬೆಳಗಾಂ ರೋಲರ್ ಸ್ಕೇಟಿಂಗ್ ಅಕಾಡೆಮಿ,<br>ನಂ.28, ಸೋಮವಾರ ಪೇಟೆ,<br>ಟಿಳಕವಾಡಿ, ಬೆಳಗಾವಿ | ಸಂಸ್ಥೆಯು ಕಳೆದ 9 ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದೆ. ಮಕ್ಕಳಿಗಾಗಿ ಉಚಿತ ತರಬೇತಿಯ ಶಿಬಿರಗಳನ್ನು ನಡೆಸಿರುತ್ತದೆ. ಸ್ಕೇಟಿಂಗ್ ರ್‍ಯಾಲಿಗಳ ಮುಖಾಂತರ ಪೋಲಿಯೋ ತಡೆಗಟ್ಟುವಿಕೆ ಹಾಗೂ "ಹೆಣ್ಣು ಮಗುವನ್ನು ರಕ್ಷಿಸಿ" ಎಂಬ ಸಂದೇಶವನ್ನು ಸಮಾಜಕ್ಕೆ ನೀಡಿರುತ್ತದೆ. ಸ್ಕೇಟಿಂಗ್ ಶಿಕ್ಷಣದಲ್ಲಿ ಅಂತರಾಷ್ಟ್ರೀಯ, ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದಲ್ಲಿ ಹೆಸರು ಮಾಡಿರುತ್ತದೆ. ಸಂಸ್ಥೆಯಿಂದ ಉತ್ತಮ ತರಬೇತಿಯನ್ನು ಪಡೆದ ಮಕ್ಕಳು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಗಿನ್ನಿಸ್ |

| | | |
|---|---|---|
| | | ದಾಖಲೆಗಳನ್ನು ಮಾಡಿರುತ್ತಾರೆ. ಮಕ್ಕಳು ಉತ್ತಮವಾಗಿ ಆಟವಾಡಲು ಪ್ರೋತ್ಸಾಹ, ರಾಜ್ಯ, ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಸ್ಪರ್ಧಿಸಲು ಮಕ್ಕಳಿಗೆ ಧನ ಸಹಾಯ, ಉಚಿತ ಆರೋಗ್ಯ ಶಿಬಿರಗಳನ್ನು ಹಮ್ಮಿಕೊಂಡಿರುತ್ತದೆ. ಅನಾಥ ಮತ್ತು ಬಡ ವಿದ್ಯಾರ್ಥಿಗಳಿಗೆ ಉಚಿತ ಸ್ಕೇಟಿಂಗ್ ಕಿಟ್ ನೀಡಿರುತ್ತದೆ. ಇದರ ಪ್ರಯೋಜನವನ್ನು ಜಿಲ್ಲೆಯ ಅನೇಕ ಕ್ರೀಡಾಪಟುಗಳು ಪಡೆದಿದ್ದಾರೆ. ರಾಜ್ಯ ಮತ್ತು ಅಂತರರಾಜ್ಯ ಮಟ್ಟದ ಸ್ಪರ್ಧೆಗಳನ್ನು ಆಯೋಜಿಸಿರುತ್ತದೆ. ಸಾಮಾಜಿಕ ಜನಜಾಗೃತಿ ಮೂಡಿಸಲು ಸ್ಕೇಟಿಂಗ್ ರ್‍ಯಾಲಿಗಳನ್ನು ಆಯೋಜಿಸುವ ಅನೇಕ ಮಕ್ಕಳನ್ನು ಹೊಂದಿರುತ್ತದೆ. |
| 3 | ಸಮೃದ್ಧಿ ಚಾರಿಟೇಬಲ್ ಟ್ರಸ್ಟ್, "ಆಶೀರ್ವಾದ" 21, ಗಣೇಶ ನಗರ, ಕುಂಬಾರವಾಡಾ ರಸ್ತೆ, ಬೀದರ-585403 | ಸಂಸ್ಥೆಯು ಮಕ್ಕಳ ಗ್ರಾಮ ಸಭೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಸೂಕ್ತ ಸಲಹೆ ಮತ್ತು ಮಾರ್ಗದರ್ಶನ ನೀಡಿ ಮಕ್ಕಳ ಭಾಗವಹಿಸುವಿಕೆಯಲ್ಲಿ ಕ್ರಿಯಾಶೀಲವಾಗಿ ಕಾರ್ಯನಿರ್ವಹಿಸುತ್ತಿದೆ. ಬಾಲಕಾರ್ಮಿಕ ಪದ್ಧತಿಯನ್ನು ತಡೆಗಟ್ಟುವಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದೆ. ಅನೇಕ ಬಾಲಕಾರ್ಮಿಕ ಮಕ್ಕಳನ್ನು ರಕ್ಷಿಸಿ ಪುನರ್‌ವಸತಿ ಕಲ್ಪಿಸಿರುತ್ತದೆ. ಶಿಕ್ಷಕರಿಗೆ, ಸ್ವಯಂ ಸೇವಾ ಸಂಸ್ಥೆಯ ಪ್ರತಿನಿಧಿಗಳಿಗೆ, ಜನಪ್ರತಿನಿಧಿಗಳಿಗೆ ಮಕ್ಕಳ ಹಕ್ಕುಗಳ ರಕ್ಷಣೆ ಹಾಗೂ ಪುನರ್‌ವಸತಿ ಜೊತೆಗೆ ಕಾನೂನಿನ ವಿಚಾರವನ್ನು ಪ್ರಚಾರ ಪಡಿಸಲು ಶ್ರಮಿಸಿರುತ್ತದೆ. ಮಕ್ಕಳ ಹಕ್ಕುಗಳನ್ನು ರಕ್ಷಣೆ ಮಾಡಲು ಸಂಸ್ಥೆ ಪ್ರಯತ್ನಿಸುತ್ತಿದೆ. |
| 4 | ಸ್ನೇಹ ಸದನ,<br>ಕಿನ್ನಿಕಂಬಳ,<br>ಕೈಕಂಬ,<br>ಮಂಗಳೂರು | ಸಂಸ್ಥೆಯು ಹೆಚ್.ಐ.ವಿ.ಯಿಂದ ಬಾಧಿತರಾದ ಮಕ್ಕಳಿಗೆ ಪುನರ್ವಸತಿ ಕಲ್ಪಿಸುವ ಕೆಲಸ ನಿರ್ವಹಿಸುತ್ತಿದೆ. ಈ ಸಂಸ್ಥೆಯು ಮಕ್ಕಳ ಕ್ಷೇಮಾಭಿವೃದ್ಧಿಗಾಗಿ ಹಲವು ರೀತಿಯ ಸೇವೆಗಳನ್ನು ಕೈಗೊಂಡಿದೆ. ಸಂಸ್ಥೆಯು ನಿರ್ಗತಿಕ ಮಕ್ಕಳ ಸುರಕ್ಷತೆಗಾಗಿ ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿದೆ. ಸಂಸ್ಥೆಯು ಮಕ್ಕಳ ಸುರಕ್ಷಿತ ಉತ್ತಮ ಗುಣಮಟ್ಟದ ಜೀವನವನ್ನು ರೂಪಿಸುವ ಬಗ್ಗೆ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಿದೆ. ಎಲ್ಲಾ ಹೆಚ್.ಐ.ವಿ ಪೀಡಿತ ಮಕ್ಕಳನ್ನು ಹತ್ತಿರದ ಸರ್ಕಾರಿ ಅನುದಾನಿತ ಶಾಲೆಗೆ ತಪ್ಪದೆ ಹಾಜರಾಗಲು ಪ್ರೇರೇಪಿಸುತ್ತಿದೆ. ಈ ಸಂಸ್ಥೆಯು ಉತ್ತಮ ಗುಣಮಟ್ಟದ ಮೇಲ್ವಿಚಾರಣೆ ಮತ್ತು ಸೇವೆಯನ್ನು ನೀಡುತ್ತಿದೆ. |

## ವ್ಯಕ್ತಿ

| ಕ್ರ.ಸಂ | ವ್ಯಕ್ತಿಯ ಹೆಸರು ಮತ್ತು ವಿಳಾಸ | ಸಾಧನೆ |
|---|---|---|
| 1 | ಶ್ರೀಮತಿ ಕೆ.ಪ್ರಭಾ ನಾರಾಯಣ ಗೌಡ,<br>ಹನುಮಂತ ಪುರ,<br>ಜರಬಂಡನಹಳ್ಳಿ, ಗೌರಿಬಿದನೂರು ತಾಲ್ಲೂಕು, ಚಿಕ್ಕಬಳ್ಳಾಪುರ | ಇವರು ಕಳೆದ 8 ವರ್ಷಗಳಿಂದ ಮಕ್ಕಳ ಕಲ್ಯಾಣ ಕ್ಷೇತ್ರದಲ್ಲಿ ಹಾಗೂ ಸಾಹಿತ್ಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಇವರು ಕಳೆದ 5 ವರ್ಷಗಳಿಂದ ಗೌರಿಬಿದನೂರು ತಾಲ್ಲೂಕಿನಲ್ಲಿ ಸುಮಾರು 10 ಬಾಲ್ಯವಿವಾಹಗಳನ್ನು ತಡೆದಿರುತ್ತಾರೆ. ಶಾಲಾ ಮಕ್ಕಳಿಗೆ ನೋಟ್‌ಬುಕ್ ಮತ್ತು ಸಮವಸ್ತ್ರ ವಿತರಿಸಿರುತ್ತಾರೆ. |

| | | |
|---|---|---|
| | ಜಿಲ್ಲೆ. | ಶಾಲೆ ಬಿಟ್ಟ ಮಕ್ಕಳನ್ನು ಶಾಲೆಗೆ ಮತ್ತೆ ಸೇರಿಸಿರುತ್ತಾರೆ. ಭಿಕ್ಷೆಬೇಡುವ ಮಕ್ಕಳನ್ನು ಈ ವೃತ್ತಿಯಿಂದ ರಕ್ಷಿಸಿರುತ್ತಾರೆ. ಹೋಟೆಲ್‌ಗಳಲ್ಲಿ ಕೆಲಸ ಮಾಡುತ್ತಿದ್ದ ಬಾಲಕಾರ್ಮಿಕ ಮಕ್ಕಳ ಮನವೊಲಿಸಿ ಶಾಲೆಗೆ ಸೇರಿಸಲು ಜಾಗೃತಿ ಉಂಟು ಮಾಡಿರುತ್ತಾರೆ. |
| 2 | ಶ್ರೀ ಪಾರಂಪಳ್ಳಿ ನರಸಿಂಹ ಐತಾಳ,<br>ವೆಂಕಟಾದ್ರಿ, ಸಾಲಿಗ್ರಾಮ,<br>ಉಡುಪಿ-576225 | ಇವರು ಮಕ್ಕಳಿಗೆ ಕಲಿಕಾ ಸಾಮಾಗ್ರಿಗಳನ್ನು ತಯಾರಿಸಿದ್ದು, ಅದನ್ನು ಉಡುಪಿ ಜಿಲ್ಲೆಯಲ್ಲಿ ಉಪಯೋಗಿಸಲಾಗುತ್ತಿದೆ. ಇವರು ಮಕ್ಕಳಿಗೆ ಚರ್ಚಾ ಸ್ಪರ್ಧೆ, ಭಜನೆ, ಸಸಿ ನೆಡುವುದು, ಕಥೆ ಬರೆಯುವುದು, ನೃತ್ಯ, ನಾಟಕ, ರಾಷ್ಟ್ರೀಯ ಹಬ್ಬಗಳ ಆಚರಣೆ ಇತರೆ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಪ್ರೋತ್ಸಾಹಿಸಿರುತ್ತಾರೆ. ಇವರು ಮಕ್ಕಳಿಗೆ ಬೇಸಿಗೆ ಶಿಬಿರವನ್ನು ಹಮ್ಮಿಕೊಂಡಿರುತ್ತಾರೆ. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ಮಕ್ಕಳಿಗೆ ವಿಶೇಷ ತರಬೇತಿಯನ್ನು ನೀಡಿರುತ್ತಾರೆ. ಇವರಿಗೆ ನಾಟಕ, ನೃತ್ಯ ಮತ್ತು ಸಂಗೀತದಲ್ಲಿ ಅಪಾರ ಜ್ಞಾನವಿದ್ದು ಇದನ್ನು ಶಾಲೆಗಳಲ್ಲಿ ಕಲಿಸುತ್ತಿದ್ದಾರೆ. ಇವರು ಮಕ್ಕಳಿಗಾಗಿ ಪುಸ್ತಕ ಮತ್ತು ಪದ್ಯಗಳನ್ನು ಬರೆದಿರುತ್ತಾರೆ. ಮಕ್ಕಳಿಗೆ ಉಚಿತ ಪುಸ್ತಕ, ಸಮವಸ್ತ್ರ, ಲೇಖನ ಸಾಮಾಗ್ರಿಗಳನ್ನು ವಿತರಿಸಿರುತ್ತಾರೆ. ಮಕ್ಕಳಿಗೆ ಉಚಿತ ಆರೋಗ್ಯ ಶಿಬಿರವನ್ನು ನಡೆಸಿ, ಉಚಿತ ಔಷಧಿಗಳನ್ನು ವಿತರಿಸಿರುತ್ತಾರೆ. ಉಡುಪಿಯ ಕೋಟದ ಶಾಂಭವಿ ವಿದ್ಯಾದಾಯಿನಿ ಶಾಲೆಯ ಮಕ್ಕಳಿಗೆ ಪ್ರತಿ ದಿನ ಸಂಜೆ ಮೊಳಕೆ ಬರಿಸಿದ ಧಾನ್ಯ ಹಾಗೂ ಇತರೆ ಆಹಾರಗಳನ್ನು ವಿತರಿಸಿರುತ್ತಾರೆ. ಇದಕ್ಕೆ ತಗಲುವ ವೆಚ್ಚವನ್ನು ತಮ್ಮ ಕುಟುಂಬವರ್ಗದವರಿಂದ ದೇಣಿಗೆ ಪಡೆದು ವಿತರಿಸಿರುತ್ತಾರೆ. |
| 3 | ಶ್ರೀ ಇಸ್ಮಾಯಿಲ್ ಮೌಲಾಸಾಬ ಉಕ್ಕಲಿ,<br>ಅರ್ಕಾಟ್ ದರ್ಗಾ,<br>ಜೆ.ಎಂ.ರಸ್ತೆ, ಝುಂಡಾ ಕಟ್ಟಾ,<br>ವಿಜಯಪುರ 586104 | ಇವರು ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆ, ಬಾಲ್ಯ ವಿವಾಹ ಪದ್ಧತಿಯ ನಿಷೇಧಿಸುವ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸಿರುತ್ತಾರೆ. ಬಡವಿದ್ಯಾರ್ಥಿಗಳಿಗೆ ಸಮಾಜದಲ್ಲಿ ಸದವಕಾಶ ಒದಗಿಸಲು ಬಗ್ಗೆ ಕೆಲಸ ಮಾಡಿರುತ್ತಾರೆ. 460 ಬಾಲಕಾರ್ಮಿಕ ಮಕ್ಕಳನ್ನು ಶಾಲೆಗೆ ಸೇರಿಸಿರುತ್ತಾರೆ. ಆರೋಗ್ಯ ತಪಾಸಣೆ ಶಿಬಿರಗಳನ್ನು ಏರ್ಪಡಿಸಿರುತ್ತಾರೆ. ಬಾಲಕಾರ್ಮಿಕತೆಯನ್ನು ನಿರ್ಮೂಲನೆ ಮಾಡಲು ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುತ್ತಾರೆ. ಪಲ್ಸ್ ಪೋಲಿಯೋ ಶಿಬಿರಗಳಲ್ಲಿ ಭಾಗವಹಿಸಿರುತ್ತಾರೆ. |
| 4 | ಶ್ರೀ ಮೆಹಬೂಬ.ಎಲ್. ಕಿಲ್ಲೇದಾರ,<br>ಸಾ॥ಬಹದ್ದೂರ ಬಂಡಿ,<br>ಗಂಗಾವತಿ ತಾಲ್ಲೂಕು,<br>ಕೊಪ್ಪಳ ಜಿಲ್ಲೆ. | ಇವರು ಸಾರ್ವಜನಿಕ ಶಿಕ್ಷಣ ಇಲಾಖೆಯ ಸರ್ವಶಿಕ್ಷಣ ಅಭಿಯಾನದಡಿಯಲ್ಲಿ ಶಾಲೆ ಬಿಟ್ಟ ಮಕ್ಕಳನ್ನು ಶಾಲೆಗೆ ಸೇರಿಸುವ ಕಾರ್ಯಕ್ರಮದ ಪ್ರಯುಕ್ತ ಬೀದಿ ನಾಟಕದಲ್ಲಿ ಅಭಿನಯ ಮಾಡಿರುತ್ತಾರೆ. ಇವರು ಜನಪದ ಕಲಾವಿದರಾಗಿದ್ದು, ಹಲವಾರು ಜಾಗೃತಿ ಕಾರ್ಯಕ್ರಮಗಳನ್ನು ನೀಡಿರುತ್ತಾರೆ. |

## ಅಸಾಧಾರಣ ಪ್ರತಿಭಾ ಪುರಸ್ಕಾರ

ರಾಜ್ಯ ಸರ್ಕಾರವು ವಿವಿಧ ಕ್ಷೇತ್ರಗಳಲ್ಲಿ ಅಸಾಧಾರಣ ಪ್ರತಿಭೆಯನ್ನು ಹೊಂದಿರುವ ಈ ಕೆಳಕಾಣಿಸಿರುವ 26 ಮಕ್ಕಳನ್ನು ರಾಷ್ಟ್ರ ಪ್ರಶಸ್ತಿಗಾಗಿ ನಾಮ ನಿರ್ದೇಶನ ಮಾಡಿದ್ದು, ಅವರೆಲ್ಲರನ್ನು ರಾಜ್ಯ ಮಟ್ಟದಲ್ಲಿ ಆಚರಿಸಲಾಗುವ ಮಕ್ಕಳ ದಿನಾಚರಣೆ ಸಮಾರಂಭದಲ್ಲಿ ಪ್ರಶಸ್ತಿ ಪತ್ರ ಮತ್ತು ನೆನಪಿನ ಕಾಣಿಕೆ ನೀಡಿ ಗೌರವಿಸಲಾಗುವುದು.

| ಕ್ರ.ಸಂ | ಹೆಸರು ಮತ್ತು ವಿಳಾಸ | ಆಯ್ಕೆಯಾಗಿರುವ ಕ್ಷೇತ್ರ |
|---|---|---|
| 1 | ಮಾ|| ಪ್ರನೀಲ್ ಬಿ ಸತಾರೆ,<br>ತಂದೆ ಡಾ|| ಭರತ್ ಎಸ್.ವಿ,<br>'ಸಪ್ತಗಿರಿ' ಡೆಂಟಲ್ ಸ್ಪೆಷಲಿಸ್ಟ್ ಕ್ಲಿನಿಕ್,<br>ಗಾಂಧಿ ಬಜಾರ್, ಶಿವಮೊಗ್ಗ-577202 | ಕಲೆ |
| 2 | ಕು|| ದೀಕ್ಷಾ ಮೂಲ್ಯ,<br>ಕಡಲಿಪ್ರಿಯಾ ಕರಡೆ,<br>ಪೆರದೂರ್ ಆಂಚೆ, ಉಡುಪಿ | ಕಲೆ |
| 3 | ಮಾ|| ಎಸ್.ಆರ್ ಅಪ್ರಮೇಯ ಕಾರ್ತಿಕ್,<br>ತಂದೆ ಎಸ್. ರಾಮನಾಥನ್,<br>#4, 2ನೇ ಮುಖ್ಯರಸ್ತೆ,<br>11ನೇ ಅಡ್ಡರಸ್ತೆ, ವಿದ್ಯಾರಣ್ಯಪುರಂ, ಮೈಸೂರು | ಕಲೆ |
| 4 | ಕು|| ಪ್ರಗತಿ ನಟವರ್ ಭಟ್ಟದ್,<br>ತಂದೆ. ನಟವರ್ ಲಾಲ್ ಎಂ. ಭಟ್ಟದ್,<br>ಎ-2, ಲಕ್ಷ್ಯ ಪಾರಡೇಸ್, ಸಾಯಿಧಾಮ, 1ನೇ ಎ.ಮೈನ್, ಜಿ.ಎಂ.ಪಾಳ್ಯ,<br>ಬೆಂಗಳೂರು-560075 | ಸಾಂಸ್ಕೃತಿಕ |
| 5 | ಮಾ|| ಲಿಖಿತ್ ಬಿ,<br>ತಂದೆ.ಬಾಬು,<br>#135, 3ನೇ ಅಡ್ಡರಸ್ತೆ,<br>ಶ್ರೀನಿವಾಸಪುರ ಕಾಲೋನಿ,<br>ಕೆಂಗೇರಿ, ಬೆಂಗಳೂರು-560060 | ಸಾಂಸ್ಕೃತಿಕ |
| 6 | ಕು|| ಪಂಚಮಿ ಮಾರೂರು,<br>ತಂದೆ ಪಾರ್ಶ್ವನಾಥ,<br>ಮಾರೂರು ಆಂಚೆ, ಮುಡಬಿದ್ರೆ, ದಕ್ಷಿಣ ಕನ್ನಡ | ಸಾಂಸ್ಕೃತಿಕ |

| | | |
|---|---|---|
| 7 | ಕು॥ ಭೂಮಿಕ ಡಿ.ಎಸ್,<br>ತಂದೆ. ಡಿ.ಎಸ್.ಬದ್ರಿನಾಥ್,<br>ನಂ.57/18, ಮೊಕ ರಸ್ತೆ,<br>ಗಾಂಧಿ ನಗರ, ಬಳ್ಳಾರಿ–583103. | ಸಾಂಸ್ಕೃತಿಕ |
| 8 | ಕು॥ ಸಹನ.ವಿ,<br>ತಂದೆ. ವಿನಾಯಕ ಎಂ.ಎಸ್<br>ಸುಶೀಲ ನಿಲಯ, ಎಸ್.ಎನ್.ಪೇಟ್,<br>2ನೇ ಅಡ್ಡರಸ್ತೆ, ಬಳ್ಳಾರಿ<br>ಬಳ್ಳಾರಿ | ಸಾಂಸ್ಕೃತಿಕ |
| 9 | ಮಾ॥ ಎ.ವಿ.ಅಲೋಕ್ ಪರ್ಲ,<br>ತಂದೆ. ಪಿ.ವೆಂಕಟರಮಣ್ಣ,<br>#2910/1, 5ನೇ ಮುಖ್ಯರಸ್ತೆ,<br>3ನೇ ಅಡ್ಡರಸ್ತೆ, ಎಂ.ಸಿ.ಸಿ. ಬಿ ಬ್ಲಾಕ್,<br>ದಾವಣಗೆರೆ | ಸಂಗೀತ |
| 10 | ಮಾ॥ ಸುರಕ್ಷಿತ್ ಗೌಡ ಡಿ.ಆರ್,<br>#460, ಸೆಂಟ್ ಅನ್ಸ್ ಶಾಲೆ ಹತ್ತಿರ,<br>ಪಿ.ಸಿ. ಟೆಕ್ಕಲ ರಸ್ತೆ,<br>ಕೋಲಾರ | ಸಂಗೀತ |
| 11 | ಮಾ॥ ಧನುಷ್.ಎನ್,<br>ತಂದೆ. ನಂಜೇಗೌಡ ಎ.ಎನ್,<br>#2681, ಮಾತೃಶ್ರೀ ನಿಲಯ,<br>2ನೇ ಹಂತ, ಹೆಬ್ಬಾಳ,<br>ಸಿಐಟಿಬಿ ಚೌಟ್ರಿ ಹತ್ತಿರ,<br>ಮೈಸೂರು–570017 | ಸಂಗೀತ |
| 12 | ಮಾ॥ ಗಗನ ಜಿ.ಗಾಂವಕರ್,<br>ತಂದೆ. ಗೋಪಾಲಕೃಷ್ಣ ಎಂ. ಗಾಂವಕರ್,<br>ಎಲ್.ವಿ.ಟಿ ಬಡಾವಣೆ,<br>ಎಲ್.ವಿ.ದೇವಸ್ಥಾನದ ಹತ್ತಿರ,<br>ಸಂತೇಕಟ್ಟೆ ಅಂಚೆ,<br>ಉಡುಪಿ–576105 | ಸಂಗೀತ |
| 13 | ಮಾ॥ ಗೌತಮ್ ಎಸ್.ಎಸ್,<br>ತಂದೆ. ಶಿವಾನಂದ ಎಸ್.ಎಸ್, ಆಂತರಿಕ ಭದ್ರತಾ<br>ವಿಭಾಗ, ಮಡಿಕೇರಿ ಗ್ರಾಮಾಂತರ ಪೊಲೀಸ್ ಸ್ಟೇಷನ್<br>ಹತ್ತಿರ, ಮಡಿಕೇರಿ–571201. | ತಾರ್ಕಿಕ |

| | | |
|---|---|---|
| 14 | ಮಾ॥ ಮೊಹಮ್ಮದ್ ಸುಹೇಲ್ ಸಿ.ಎಸ್,<br>ತಂದೆ. ಸಲೀಮ್ ಪಾಶ,<br>ಆಂಚೆಕೇರಿ ಸ್ಟ್ರೀಟ್,<br>ರಾಮ ಮಂದಿರದ ಹತ್ತಿರ, ಶ್ರೀರಂಗಪಟ್ಟಣ,<br>ಮಂಡ್ಯ | ತಾರ್ಕಿಕ |
| 15 | ಮಾ॥ ರಾಹುಲ್ ಆರ್. ಪಾರ್ವತಿಮಠ್<br>ತಂದೆ. ರಾಜು ಪಾರ್ವತಿಮಠ್,<br>ಹುಂಡೆಕಾರಗಲ್ಲಿ,<br>ಬಾಗಲಕೋಟೆ. | ತಾರ್ಕಿಕ |
| 16 | ಮಾ॥ ಮಹಮ್ಮದ್ ಮಸಿಹುದ್ದೀನ್,<br>ಮನೆ ನಂ.12–12–213/2,<br>ಪಡೆಲ ಎಣ್ಣೆ ಮಿಲ್ ಹಿಂಭಾಗ,<br>ಹಜೆ ಕಾಲೋನಿ, ರಾಯಚೂರು. | ತಾರ್ಕಿಕ |
| 17 | ಕು॥ ಗಾನಶ್ರೀ ಎ.<br>ತಂದೆ ಅಶ್ವತ್. ಎನ್,<br>ಮನೆ ನಂ.317, ಭುವನೇಶ್ವರಿ ನಗರ,<br>7ನೇ ಅಡ್ಡರಸ್ತೆ, ತುಮಕೂರು ರಸ್ತೆ,<br>ದೊಡ್ಡಬಳ್ಳಾಪುರ, ಬೆಂಗಳೂರು. | ಕ್ರೀಡೆ |
| 18 | ಮಾ॥ ನಿಹಾಲ್ ಜೆ,<br>ತಂದೆ. ಜಗನ್ನಾಥ್ ಗೌಡ,<br>#34, 15ನೇ ಅಡ್ಡರಸ್ತೆ,ತೋಟಗಾರಿಕೆ ಕಛೇರಿ ರಸ್ತೆ,<br>ಸೋಮೇಶ್ವರಪುರಂ, ತುಮಕೂರು–572102 | ಕ್ರೀಡೆ |
| 19 | ಕು॥ ಮೇಘನ ಎಂ.ಬಿ,<br>ತಂದೆ. ಮಂಜುನಾಥ ಎನ್,<br>ಮೇಘನ ನಿಲಯ, ದವಳಗಿರಿ ಬಡಾವಣೆ,<br>ಎಸ್.ಜೆ.ಎಂ.ಕಾಲೇಜ್ ಹತ್ತಿರ,<br>ಮಾಳಪ್ಪನಹಟ್ಟಿ ರಸ್ತೆ, ಚಿತ್ರದುರ್ಗ–577501. | ಕ್ರೀಡೆ |
| 20 | ಮಾ॥ ಅಮೃತ್ ನಾಗೇಶ್ ಮುದ್ರಬೆಟ್,<br>ತಂದೆ.ನಾಗೇಶ್ ಎಲ್.ಮುದ್ರಬೆಟ್,<br>ಗಿರಿಧಾಮ,115, 2ನೇ ಅಡ್ಡರಸ್ತೆ, ದಾನೇಶ್ವರಿ ನಗರ,<br>ವಿದ್ಯಾಗಿರಿ, ಧಾರವಾಡ–580004. | ಕ್ರೀಡೆ |
| 21 | ಕು॥ ರಿಯಾ ಎಲಿಜಬೆತ್ ಅಚ್ಚಯ್ಯ,<br>ತಂದೆ. ಕೆ.ಎನ್.ಅಚ್ಚಯ್ಯ, #1836/ಬಿ, 12ನೇ<br>ಮುಖ್ಯರಸ್ತೆ, 2ನೇ ಹಂತ, ವಿಜಯನಗರ, ಮೈಸೂರು–<br>570017 | ಕ್ರೀಡೆ |
| 22 | ಕು॥ ಅನನ್ಯ ಕೆ.ಜಿ,<br>ತಂದೆ. ಗೋಪಾಲ್ ಕೆ,<br>ಶ್ರೀ ಸತ್ಯ ಎಕ್ಸ್‌ಟೆನ್ಷನ್, ಮುಡಿಗೆರೆ ರಸ್ತೆ,<br>ಕುವೆಂಪು ನಗರ, ಬೇಲೂರು ಆಂಚೆ, ಹಾಸನ | ನಾವೀನ್ಯತೆ |

| | | |
|---|---|---|
| 23 | ಕು॥ ಧೃತಿ ಮುಂಡೋಡಿ,<br>ಮುಂಡೋಡಿ ಮನೆ,<br>ನಾಲ್ಕೂರು ಗ್ರಾಮ, ಸುಳ್ಯ ತಾ॥<br>ದಕ್ಷಿಣ ಕನ್ನಡ ಜಿಲ್ಲೆ. | ನಾವೀನ್ಯತೆ |
| 24 | ಮಾ॥ ಯಶಸ್ವಿ ಅಜಿತ್ ಕುಮಾರ್ ಬಾಗಮಾರ,<br>ತಂದೆ. ಅಜಿತ್‌ಕುಮಾರ್ ಆಶೋಕಕುಮಾರ ಬಾಗಮಾರ,<br>ಎಂ.ದೇವರಾಜ್ ಡುಬ್ಲೆ ರಸ್ತೆ,<br>ಗಂಜೇದ್ರಗಡ ಅಂಚೆ,<br>ರೋಣ ತಾ॥. ಗದಗ-582114 | ಸಮಾಜ ಸೇವೆ |
| 25 | ಮಾ॥ ಅಭಿಗ್ಯ ಆನಂದ್,<br>ತಂದೆ. ಆನಂದ್ ರಾಮಸುಬ್ರಮಣ್ಯನ್,<br>#108/15, ಎಮ್‌ರಾಲ್ಡ್ ಎನ್‌ಕ್ಲೇವ್,<br>ಇನ್‌ಫೋಸಿಸ್ ಹತ್ತಿರ, ಮೈಸೂರು-570016. | ಇತರೆ |
| 26 | ಮಾ॥ ಅಂತಃಕರಣ,<br>ತಂದೆ. ಶಂಕರಪ್ಪ ಹೆಚ್.ಎಸ್,<br>'ದೇಸಿ ಸಂಸ್ಕೃತಿ' ಮೈಲಾರೇಶ್ವರ ಕಾಂಪ್ಲೆಕ್ಸ್,<br>ಬಿ.ಹೆಚ್.ರಸ್ತೆ,<br>ಶಿವಮೊಗ್ಗ-577201. | ಇತರೆ |

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು, ಬಾಲಭವನ ಸೊಸೈಟಿ ಬೆಂಗಳೂರು, ಕನ್ನಡ ಮತ್ತು ಸಂಸ್ಕೃತಿ , ತೋಟಗಾರಿಕೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಶಿಕ್ಷಣ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ, ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ, ಸಾಹಿತ್ಯ ಅಕಾಡೆಮಿ, ಜನಪದ ಅಕಾಡೆಮಿ, ಲಲಿತ ಕಲಾ ಅಕಾಡೆಮಿ ಮತ್ತು ಕಾರ್ನಾಟಕ ಬಾಲವಿಕಾಸ ಅಕಾಡೆಮಿ ಸಹಯೋಗದೊಂದಿಗೆ ಮಕ್ಕಳ ಹಬ್ಬ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು ಸದರಿ ಕಾರ್ಯಕ್ರಮವನ್ನು ದಿನಾಂಕ 14-11-2015 ರಂದು ಸಂಜೆ 4.30ಗಂಟೆಗೆ ಕರ್ನಾಟಕ ರಾಜ್ಯದ ಗೌರವಾನ್ವಿತ ಮುಖ್ಯ ಮಂತ್ರಿಗಳು ಉದ್ಘಾಟಿಸಲಿದ್ದಾರೆ. ಮಕ್ಕಳನ್ನು ಮನರಂಜಿಸುವ ಸಲುವಾಗಿ ಮಕ್ಕಳ ಹಬ್ಬ ಕಾರ್ಯಕ್ರಮವು ದಿನಾಂಕ 14-11-15 ಮತ್ತು 15-11-2015 ರಂದು ನಡೆಯಲಿದ್ದು ಈ ಎರಡೂ ದಿವಸಗಳು  ಭರತ ನಾಟ್ಯ, ಜನಪದ ನೃತ್ಯ, ಡೊಳ್ಳು ಕುಣಿತ, ಕೂಚಿಪುಡಿ ನೃತ್ಯ, ಮಿಮಿಕ್ರಿ, ಯಕ್ಷಗಾನ, ಲಂಬಾಣಿ ನೃತ್ಯ, ಕಥಕ್ ನೃತ್ಯ, ಮೈಮ್ ಶೋ, ಪಪೆಟ್ ಶೋ, ವೀಣಾ ವಾದನ, ತಬಲ, ಜುಗಲ್ ಬಂದಿ, ಮೋಹಿನಿ ಅಟ್ಟಂ, ರಾಜಸ್ತಾನಿ ನೃತ್ಯ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಬಾಲಭವನದ ಒಳಗಡೆ ಹಾಗೂ ಕಬ್ಬನ್ ಉದ್ಯಾನವನದ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ. ಚಿತ್ರಕಲೆ, ಬಣ್ಣಹಚ್ಚುವುದು, ಮಡಕೆ ತಯಾರಿಸುವುದು, ನಾಟಕ ಮುಂತಾದ ಕ್ರಿಯಾತ್ಮಕ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿದೆ. ರಾಜ್ಯಾದ್ಯಾಂತ ಇರುವ ಬಾಲಮಂದಿರದ ಮಕ್ಕಳು ಈ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ.

ವಿವೇಕಾನಂದ ವಿಶ್ವ ಪ್ರಕೃತಿ ಯೋಗ ಪ್ರತಿಷ್ಠಾನ ಸಂಸ್ಥೆಯಿಂದ ಸುಮಾರು 150 ಮಕ್ಕಳು ಯೋಗ ಪ್ರದರ್ಶನವನ್ನು ನೀಡಲಿದ್ದಾರೆ. ಯುನೈಟೆಡ್ ವೇ ಆಫ್ ಬೆಂಗಳೂರು ಮತ್ತು ವಿದ್ಯಾರಣ್ಯ ಸಂಸ್ಥೆ ಬೆಂಗಳೂರು ವತಿಯಿಂದ ಬುಗುರಿ, ಗಿಲ್ಲಿದಾಂಡು, ಕುಂಟೆಬಿಲ್ಲೆ, ಪಗಡೆ, ಲಗೋರಿ, ಸೈಕಲ್ ಟೈಯರ್ ಓಡಿಸುವುದು, ಕಪ್ಪು ಮತ್ತು ಬಾಲ್, ಅಜ್ಜಿ ಕಥೆ ಮುಂತಾದ ಗ್ರಾಮೀಣ ಜನಪದ ಆಟಗಳನ್ನು ಮಕ್ಕಳಿಗೆ ಹಮ್ಮಿಕೊಳ್ಳಲಾಗಿದೆ.

ವಿಕಲಚೇತನ ಮತ್ತು ಸಾಮನ್ಯ ಮಕ್ಕಳಿಗೆ ಪ್ರತ್ಯಕವಾಗಿ ಕ್ರೀಡಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಸುಮಾರು 700 ವಿಕಲಚೇತನ ಮಕ್ಕಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಈ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ದಿನಾಂಕ 15-11-2015 ರಂದು ಮಕ್ಕಳಿಗೊಸ್ಕರ ಚಿತ್ರಕಲೆ, ರಸಪ್ರಶ್ನೆ, ಕಥೆ ಹೇಳುವುದು ಮುಂತಾದ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿದೆ. ಚಿಕ್ಕ ಮಕ್ಕಳಿಗೊಸ್ಕರ ಫ್ಯಾನ್ಸಿ ಡ್ರೆಸ್ ಮತ್ತು ಪುಟಾಣಿಗಳಿಗೋಸ್ಕರ ಬೇಬಿ ಶೋ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಹಯೋಗದೊಂದಿಗೆ ಆರೋಗ್ಯ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿದೆ.

ಮಕ್ಕಳ ಮನರಂಜನೆಗಾಗಿ ಕಬ್ಬನ್ ಉದ್ಯಾನವನ ಪರಿಸರದಲ್ಲಿ **ಡಿಸ್ನಿ ಗೊಂಬೆಗಳು ಸಂಚರಿಸಲಿವೆ.** ಮಕ್ಕಳನ್ನು ಮನರಂಜಿಸಲು ಎತ್ತಿನ ಗಾಡಿಯಲ್ಲಿ ಓಡಾಡಲು ವ್ಯವಸ್ಥೆ ಮಾಡಲಾಗಿದೆ. ಸ್ರೀ ಶಕ್ತಿ ಸಂಘಗಳು ಮತ್ತು ಇತರೆ ಇಲಾಖೆ ವತಿಯಿಂದ ಮಕ್ಕಳಿಗೆ ಬಳಸುವ ಉತ್ಪನ್ನಗಳನ್ನು ಮತ್ತು ಮಕ್ಕಳಿಗೋಸ್ಕರ ಇರುವ ವಿವಿದ ಕಾರ್ಯಕ್ರಮಗಳ ಬಗ್ಗೆ ವಸ್ತುಪ್ರದರ್ಶನವನ್ನು ಏರ್ಪಡಿಸಲಾಗಿದೆ. ಸ್ತ್ರೀಶಕ್ತಿ ಸಂಘಗಳ ವತಿಯಿಂದ ಎರಡು ಮೋಬೈಲ್ ವ್ಯಾನ ವೈವಸ್ಥೆ ಮಾಡಲಾಗಿದೆ. ಅಂಗನವಾಡಿ ಕಾರ್ಯಕರ್ತೆಯರಿಂದ ಪೂರಕ ಪೌಷ್ಟಿಕ ಆಹಾರ ತಯಾರಿಕೆಯ ಪ್ರಾತ್ಯಕ್ಷಿಕತೆ, ಮಕ್ಕಳ ದಿನಾಚರಣೆ ಅಂಗವಾಗಿ ಬಾಲಕಿಯರ ಬಾಲಮಂದಿರ ಮತ್ತು ಬಾಲಕರ ಬಾಲಮಂದಿರ ಮಕ್ಕಳು ರಚಿಸಿರುವ ಕವನಸಂಕಲನ **"ಸಂಪ್ರೀತಿ ಸಂತೃಪಿ"** ಎಂಬ ಪುಸ್ತಕ ಬಿಡುಗಡೆಮಾಡಲಾಗುವುದು.ಮಕ್ಕಳ ಕಾರ್ಯಕ್ರಮಗಳನ್ನು **"ಧ್ವನಿಸುರುಳಿ"** ಮೂಲಕ ಪ್ರಚಾರ ಮಾಡಲಾಗುತ್ತದೆ.

ತೋಟಗಾರಿಕೆ ಇಲಾಖೆವತಿಯಿಂದ ಈ ಎರಡೂ ದಿವಸಗಳು ವಿಜೃಂಭಣೆಯಿಂದ ಪುಷ್ಪ ಪ್ರದರ್ಶನ, ವೆಪನ್ ಮತ್ತು ಬ್ಯಾಂಡ್ ಶೋ ಕೂಡ ಆಯೋಜಿಸಲಾಗಿದೆ. ಈ ಎರಡೂ ದಿನಗಳಲ್ಲಿ ಸುಮಾರು 10000ದಿಂದ 15000 ಮಕ್ಕಳು ತಮ್ಮ ಪೋಷಕರೊಂದಿಗೆ ಭಾಗವಹಿಸಿ ಕಾರ್ಯಕ್ರಮದಲ್ಲಿ ನಲಿದು ಆನಂದಿಸಲಿದ್ದಾರೆ. ಸದರಿ ಕಾರ್ಯಕ್ರಮಕ್ಕೆ ಎಲ್ಲರಿಗೂ ಉಚಿತ ಪ್ರವೇಶವನ್ನು ಕಲ್ಪಿಸಲಾಗಿದೆ.

ಕಾರ್ಯಕ್ರಮದ ಸ್ಥಳಕ್ಕೆ ಬೆಂಗಳೂರು ನಗರ ಮತ್ತು ಗ್ರಾಮಾಂತರ ಪ್ರದೇಶಗಳಿಂದ ಮಕ್ಕಳ ಹಾಗೂ ಪೋಷಕರ ಪ್ರಯಾಣದ ಸೌಲಭ್ಯಕ್ಕಾಗಿ ವಿಶೇಷ ಬಸ್‌ಗಳ ವ್ಯವಸ್ಥೆಯನ್ನು ಮಾಡಲು ಬಿ.ಎಂ.ಟಿ.ಸಿ ಸಾರಿಗೆ ಸಂಸ್ಥೆಯವರು ಒಪ್ಪಿರುತ್ತಾರೆ. ಸ್ವಂತ ವಾಹನದಲ್ಲಿ ಬರುವವರಿಗೆ ವಾಹನ ನಿಲುಗಡೆಗೆ ಸ್ಥಳಾವಕಶ ಕಲ್ಪಿಸಲು ಕ್ರಮವಹಿಸಲಾಗಿದೆ.

ಮಕ್ಕಳ ದಿನಾಚರಣೆ ಕಾರ್ಯಕ್ರಮವನ್ನು ರಾಜ್ಯಾದ್ಯಂತ ಎಲ್ಲಾ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಹಮ್ಮಿಕೊಳ್ಳಲಾಗುತ್ತಿದೆ. ನವೆಂಬರ್ ಮಾಹೆಯಲ್ಲಿ ಮಕ್ಕಳ ಗ್ರಾಮಸಭೆಯನ್ನು ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಪಂಚಾಯತ್ ರಾಜ್ ಗ್ರಾಮೀಣ ಅಭಿವೃದ್ಧಿ ಇಲಾಖೆಯಿಂದ ಆಯೋಜಿಸಲಾಗಿದೆ.

*****

❖ ಈ ವರ್ಷ ಮೊದಲ ಬಾರಿಗೆ ಮಕ್ಕಳ ದಿನಾಚರಣೆಯನ್ನು ಸಂಭ್ರಮ ಸಡಗರದ ಮಕ್ಕಳ ಹಬ್ಬವನ್ನಾಗಿ ದಿನಾಂಕ: 14-11-2015 ಮತ್ತು 15-11-2015ರಂದು ಆಚರಿಸಲಾಗುತ್ತಿದೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು, ಬಾಲಭವನ ಸೊಸೈಟಿ ಬೆಂಗಳೂರು, ಕನ್ನಡ ಮತ್ತು ಸಂಸ್ಕೃತಿ, ತೋಟಗಾರಿಕೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಶಿಕ್ಷಣ, ವಿಕಲಚೇತ ನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ, ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ, ಸಾಹಿತ್ಯ ಅಕಾಡೆಮಿ, ಜನಪದ ಅಕಾಡೆಮಿ, ಲಲಿತ ಕಲಾ ಅಕಾಡೆಮಿ ಮತ್ತು ಕಾರ್ನಾಟಕ ಬಾಲವಿಕಾಸ ಅಕಾಡೆಮಿ ಸಹಯೋಗದೊಂದಿಗೆ ಮಕ್ಕಳ ಹಬ್ಬ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು ಸದರಿ ಕಾರ್ಯಕ್ರಮವನ್ನು ದಿನಾಂಕ 14-11-2015 ರಂದು ಸಂಜೆ 4.30ಗಂಟೆಗೆ ಕರ್ನಾಟಕ ರಾಜ್ಯದ ಗೌರವಾನ್ವಿತ ಮುಖ್ಯ ಮಂತ್ರಿಗಳು ಉದ್ಘಾಟಿಸಲಿದ್ದಾರೆ.

❖ **ಮಕ್ಕಳನ್ನು ಮನರಂಜಿಸುವ ಸಲುವಾಗಿ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.**

**14-11-2015 ರಂದು ಮಕ್ಕಳಿಗಾಗಿ ಹಮ್ಮಿಕೊಂಡಿರುವ ಕಾರ್ಯಕ್ರಮಗಳು:**

- ಸಮರ್ಥನ್ ಸಂಸ್ಥೆ ಮಕ್ಕಳಿಂದ-ಶಾಸ್ತ್ರೀಯ ನೃತ್ಯ,
- ದೀಪಾ ಸಂಸ್ಥೆ ಮಕ್ಕಳಿಂದ-ಜನಪದ ನೃತ್ಯ,
- ಮಾತೃ ಸಂಸ್ಥೆ ಮಕ್ಕಳಿಂದ- ನೃತ್ಯ,
- ಕರ್ನಾಟಕ ಲಲಿತಾ ಕಲಾ ಅಕಾಡೆಮಿ ಇವರ ಸಹಯೋಗದೊಂದಿಗೆ ಚಿತ್ರಕಲಾ ಶಿಬಿರ ಸರ್ಕಾರಿ ಬಾಲಕರ ಹಾಗೂ ಬಾಲಕಿಯರ ಬಾಲ ಮಂದಿರಗಳು ಹಾಗೂ ವಿಕಲಚೇತನ ಮಕ್ಕಳು ಶಿಬಿರದಲ್ಲಿ ಭಾಗವಹಿಸುವರು.
- ಕರ್ನಾಟಕ ಜನಪದ ಅಕಾಡೆಮಿ ಸಹಯೋಗದೊಂದಿಗೆ ಕೊಪ್ಪಳ ಜಿಲ್ಲೆಯ ಬಾಲಕಿಯರ ಬಾಲಮಂದಿರದ ಮಕ್ಕಳಿಂದ ಲಂಬಾಣಿ ನೃತ್ಯ ಮತ್ತು ಶಿವಮೊಗ್ಗ ಜಿಲ್ಲೆಯ ಬಾಲಮಂದಿರದ ಮಕ್ಕಳಿಂದ ಡೊಳ್ಳು ಕುಣಿತ

**ಬುರುಜು ಗೋಡೆ ಆವರಣ ಬಾಲ ಭವನ, ಕಬ್ಬನ್ ಉದ್ಯಾನವನ, ಬೆಂಗಳೂರಿನಲ್ಲಿ ಬಾಲಭವನದ ವತಿಯಿಂದ ಏರ್ಪಡಿಸುವ ಸಾಂಸ್ಕೃತಿಕ ಹಾಗೂ ಮನರಂಜನಾ ಕಾರ್ಯಕ್ರಮಗಳ ಪಟ್ಟಿ**

- ವಿವಿಧ ನೃತ್ಯಗಳ ಪ್ರದರ್ಶನ (ಕಥಕ್ ನೃತ್ಯ, ಕೂಚಿಪುಡಿ ನೃತ್ಯ ಸೇರಿದಂತೆ)
- ಕನ್ನಡ ಭಾಷೆಯ - ಮಕ್ಕಳ ನಾಟಕ, ಟಾಗೂರ್ ಅಜ್ಜನ ಕತೆಗಳು
- ಮಿಮಿಕ್ರಿ
- ಕೊಳಲು ವಾದನ ಮತ್ತು ಡ್ರಮ್ಸ್
- ಯಕ್ಷಗಾನ - ಪ್ರಸಂಗ ಚಕ್ರವ್ಯೂಹ

## ದಿನಾಂಕ 15-11-2015ರಂದು ಹಮ್ಮಿಕೊಂಡಿರುವ ಕಾರ್ಯಕ್ರಮಗಳು:

**ಕನಾಟಕ ಜಾನಪದ ಅಕಾಡೆಮಿಯ ಅಧ್ಯಕರಾದ ಶ್ರೀ ಪಿಚ್ಚಳ್ಳಿ ಶ್ರೀನಿವಾಸ್, ಇವರ ನಿರ್ದೇಶನದಲ್ಲಿ ಸರ್ಕಾರಿ ಬಾಲಮಂದಿರದ ಮಕ್ಕಳಿಂದ ಜನಪದ ಕಲೆ ಪ್ರದರ್ಶನ**

- ಕೋಲಾರ ಜಿಲ್ಲೆಯ ಬಾಲಕರ ಬಾಲಮಂದಿರದ ಮಕ್ಕಳಿಂದ ತಮಟೆ ವಾದ್ಯ
- ದಾವಣಗೆರೆ ಜಿಲ್ಲೆಯ ಬಾಲಕಿಯರ ಬಾಲಮಂದಿರದ ಮಕ್ಕಳಿಂದ ವೀರಗಾಸೆ
- ಬೆಂಗಳೂರು ನಗರ ಬಾಲಕರ ಬಾಲಮಂದಿರದ ಮಕ್ಕಳಿಂದ ಕಂಸಾಳೆ
- ಬಾಗಲಕೋಟೆ ಜಿಲ್ಲೆಯ ಬಾಲಕರ ಬಾಲಮಂದಿರದ ಮಕ್ಕಳಿಂದ ಕರಡಿ ಮಜಲು
- ಗದಗ ಜಿಲ್ಲೆಯ ಬಾಲಕಿಯರ ಬಾಲಮಂದಿರದ ಮಕ್ಕಳಿಂದ ಕೋಲಾಟ
- ಚಿಕ್ಕಮಗಳೂರು ಜಿಲ್ಲೆಯ ಬಾಲಕರ ಬಾಲಮಂದಿರದ ಮಕ್ಕಳಿಂದ ವೀರಗಾಸೆ
- ಉಡುಪಿ ಜಿಲ್ಲೆಯ ಬಾಲಕಿಯರ ಬಾಲಮಂದಿರದ ಮಕ್ಕಳಿಂದ ಕಂಗೀಲು
- ಬಳ್ಳಾರಿ ಜಿಲ್ಲೆಯ ಬಾಲಕರ ಬಾಲಮಂದಿರದ ಮಕ್ಕಳಿಂದ ಹಗಲು ವೇಷ
  ಬಾಲವಿಕಾಸ ಅಕಾಡೆಮಿ ಧಾರವಾಡ ಇವರ ಸಹಯೋಗದೊಂದಿಗೆ ಬೀದರ ಜಿಲ್ಲೆಯ ಬಾಲಕಿಯರ ಬಾಲಮಂದಿರದ ಮಕ್ಕಳಿಂದ ನೃತ್ಯ ರೂಪಕ, ಹುಬ್ಬಳ್ಳಿ ಶಾಲೆಯ ಮಕ್ಕಳಿಂದ ಜನಪದ ನೃತ್ಯ, ಕುಮಾರಿ ತನುಜಾ ಉಮೇಶ್ ರಣದೇವಿ ಇವರಿಂದ ಕರಾಟೆ ಪ್ರದರ್ಶನ

**ಬಾಲಭವನದ ವತಿಯಿಂದ ಹಮ್ಮಿಕೊಂಡಿರುವ ಮನರಂಜನಾ ಕಾರ್ಯಕ್ರಮಗಳು:**

- ಸಂಗೀತ ಕಲಾವರ್ಧಿನಿ ಸಂಸ್ಥೆಯ ಮಕ್ಕಳಿಂದ-ಸುಗಮ ಸಂಗೀತ, ಭರತ ನಾಟ್ಯ, ಏಕಪಾತ್ರಾಭಿನಯ,
- ನಾಟ್ಯಾಂತರ ಸಂಸ್ಥೆಯ ಮಕ್ಕಳಿಂದ- ಕಥಕ್ ನೃತ್ಯ
- ಶಿವಕುಮಾರ್ ಬೇಗಾರ್ ಶಿಷ್ಯರಿಂದ- ಯಕ್ಷಗಾನ
- ಶ್ರಿ ಆನೂರ್ ಅನಂತಮೂರ್ತಿ ಸಂಸ್ಥೆಯ ಮಕ್ಕಳಿಂದ-ಪಾತ್ರ ನಾಗ ವೈಭವ ತಾಳ ವಾದ್ಯ
- ಪ್ರಶಾಂತ್ ಶಾಸ್ತ್ರೀ ಸಂಸ್ಥೆ ಮತ್ತು ಮರಾಠಿ ಮಂಡಲ್ ತಂಡ ಮತ್ತು ನಾಟ್ಯೇಶ್ವರ ನೃತ್ಯ ಶಾಲೆ ಸಂಸ್ಥೆಯ ಮಕ್ಕಳಿಂದ-ನೃತ್ಯ ಪ್ರದರ್ಶನ
- ಬಾಲಭವನ ಮಕ್ಕಳಿಂದ- ಮೈಮ್ ಶೋ
- ಲಕ್ಷ್ಮೀ ದಾಸ್ ಇವರ ಸಂಸ್ಥೆ ಮಕ್ಕಳಿಂದ-ಸಮೂಹ ವಿಣಾವಾದನ
- ಶ್ರೀ ರಂಜನ್-ಇವರ ಸಂಸ್ಥೆಯ ಮಕ್ಕಳಿಂದ- ಕಲರಿ ಪಯಿಟ್ಟು
- ಅರುಣ್ ಮತ್ತು ತಂಡದವರಿಂದ - ಜುಗಲ್ ಬಂದಿ
- ಶ್ರಿಮತಿ ಶ್ರೀದೇವಿ ಉನ್ನಿ ಇವರ ಸಂಸ್ಥೆ ಮಕ್ಕಳಿಂದ- ಮೋಹಿನಿ ಅಟ್ಟಂ
- ಸ್ಕೂಲ್ ಆಫ್ ಮಂಗಣಿಯಾರ್ ಇವರ ಸಂಸ್ಥೆ ಮಕ್ಕಳಿಂದ- ರಾಜಸ್ತಾನಿ ನೃತ್ಯ

**ಕಬ್ಬನ್ ಉದ್ಯಾನವನದ ರೇನ್ ಶೆಲ್ಟರ್‌ನಲ್ಲಿ( ಮಹಾರಾಜರ ಪ್ರತಿಮೆಯ ಬಳಿ)ಕರ್ನಾಟಕ ಸಾಹಿತ್ಯ ಅಕಾಡೆಮಿ ಸಹಯೋಗದೊಂದಿಗೆ**

- ಕಥೆ ಹೇಳುವ ಸ್ಪರ್ಧೆ
- ರಸಪ್ರಶ್ನೆ ಸ್ಪರ್ಧೆ
- ವೇಷಭೂಷಣ ಪ್ರದರ್ಶನ

**ದಿನಾಂಕ 14-11-2015 ಮತ್ತು 15-11-2015 ಎರಡೂ ದಿನಗಳೂ ಹಮ್ಮಿಕೊಂಡಿರುವ ಕಾರ್ಯಕ್ರಮಗಳು:**

❖ ಸ್ವಾಮಿ ವಿವೇಕಾನಂದ ವಿಶ್ವ ಪ್ರಕೃತಿ ಯೋಗ ಪ್ರತಿಷ್ಠಾನ ಇವರ ಸಹಯೋಗದೊಂದಿಗೆ ಮಕ್ಕಳಿಂದ ಯೋಗಾಸನ ಪ್ರದರ್ಶನ

❖ ವಿದ್ಯಾರಣ್ಯ ಸಂಸ್ಥೆ ಹಾಗೂ ಯುನೈಟೆಡ್ ವೇ ಆಫ್ ಬೆಂಗಳೂರು ಸ್ವಯಂಸೇವಾ ಸಂಸ್ಥೆಗಳಿಂದ ಗ್ರಾಮೀಣ ಆಟಗಳಾದ ಎತ್ತಿನ ಗಾಡಿ ಸವಾರಿ, ಬುಗುರಿ, ಗಿಲ್ಲಿದಾಂಡು, ಕುಂಟೆಬಿಲ್ಲೆ, ಚಾಟರ್ ಬಿಲ್ಲು, ಚೌಕಾಬಾರ, ಆಣೆಕಲ್ಲು, ಪಗಡೆ, ಲಗೋರಿ, ಸೈಕಲ್ ಟೈಯರ್ ಓಡಿಸುವುದು, ಕಪ್ಪು ಮತ್ತು ಬಾಲ್, ಅಜ್ಜಿ ಕಥೆ ಮುಂತಾದವುಗಳನ್ನು ಮಕ್ಕಳಿಗಾಗಿ ಹಮ್ಮಿಕೊಳ್ಳಲಾಗಿದೆ.

❖ ಗ್ರಾಮೀಣ ಕಲೆಗಳಾದ ಮಜ್ಜಿಗೆ ಕಡೆಯುವುದು, ಬುಟ್ಟಿ ಹೆಣೆಯುವುದು, ಖಾದಿ ನೇಯುವುದು, ರಂಗೋಲಿ ಹಾಕುವುದು, ಭತ್ತ ಕುಟ್ಟುವುದು, ತೆಂಗಿನ ಗರಿಯಿಂದ ವಾಚು, ಕನ್ನಡಕ, ಪೀಪೀ ತಯಾರಿಸುವುದು, ರಾಗಿ ಬೀಸುವುದು, ಮಡಕೆ ತಯಾರಿಸುವುದು, ಅಜ್ಜಿ ಕಥೆ, ಇಟ್ಟಿಗೆ ತಯಾರಿಸುವುದು, ಒನಕೆ ಕುಟ್ಟುವುದು, ಎಲೆಯ ಮೇಲೆ ಬಣ್ಣ ಬಿಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ

❖ ವಿಕಲಚೇತನ ಮಕ್ಕಳು ಒಳಗೊಂಡಂತೆ ಮಕ್ಕಳಿಗಾಗಿ ವಿವಿಧ ಕ್ರೀಡೆಗಳನ್ನು ಏರ್ಪಡಿಸಲಾಗಿದೆ.

❖ ವಿಕಲಚೇತನ ಮತ್ತು ಸಾಮಾನ್ಯ ಮಕ್ಕಳಿಗೆ ಪ್ರತ್ಯೇಕವಾಗಿ ಕ್ರೀಡಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಸುಮಾರು 700 ವಿಕಲಚೇತನ ಮಕ್ಕಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಈ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

❖ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಹಯೋಗದೊಂದಿಗೆ ಆರೋಗ್ಯ ತಪಾಸಣಾ ಶಿಬಿರವನ್ನು ಇಂದಿರಾ ಪ್ರಿಯದರ್ಶಿನಿ ಮಕ್ಕಳ ಗ್ರಂಥಾಲಯದ ಬಳಿ ಆಯೋಜಿಸಲಾಗಿದೆ.

❖ ಮಕ್ಕಳ ಮನರಂಜನೆಗಾಗಿ ಕಬ್ಬನ ಉದ್ಯಾನವನದ ಪರಿಸರದಲ್ಲಿ ಡಿಸ್ನಿ ಗೊಂಬೆಗಳು ಸಂಚರಿಸಲಿವೆ.

❖ ಸ್ತ್ರೀ ಶಕ್ತಿ ಸಂಘಗಳು ಮತ್ತು ಇತರೆ ಇಲಾಖೆಗಳ ವತಿಯಿಂದ ಮಕ್ಕಳು ಬಳಸುವ ಉತ್ಪನ್ನಗಳನ್ನು ಮತ್ತು ಮಕ್ಕಳಿಗಾಗಿ ಇರುವ ವಿವಿಧ ಕಾರ್ಯಕ್ರಮಗಳ ಬಗ್ಗೆ ವಸ್ತು ಪ್ರದರ್ಶನವನ್ನು

ಏರ್ಪಡಿಸಲಾಗಿದೆ. ಸ್ತ್ರೀಶಕ್ತಿ ಸಂಘಗಳ ವತಿಯಿಂದ ಉತ್ಪನ್ನಗಳ ಪ್ರದರ್ಶನ ಹಾಗೂ ಮಾರಾಟಕ್ಕಾಗಿ ಎರಡು ವ್ಯಾನ್‌ಗಳ ವ್ಯವಸ್ಥೆ ಮಾಡಲಾಗಿದೆ.

- ❖ ಅಂಗನವಾಡಿ ಕಾರ್ಯಕರ್ತೆಯರಿಂದ ಪೂರಕ ಪೌಷ್ಟಿಕ ಆಹಾರ ತಯಾರಿಕೆಯ ಪ್ರಾತ್ಯಕ್ಷಿಕತೆ ಹಾಗೂ ಮಾರಾಟ.
- ❖ ಮಕ್ಕಳ ದಿನಾಚರಣೆ ಅಂಗವಾಗಿ ಬಾಲಕಿಯರ ಮತ್ತು ಬಾಲಕರ ಬಾಲಮಂದಿರ ಮಕ್ಕಳು ರಚಿಸಿರುವ ಕವನಸಂಕಲನ **"ಸಂಪ್ರೀತಿ ಸಂತೃಪ್ತಿ"** ಎಂಬ ಪುಸ್ತಕ ಬಿಡುಗಡೆ ಮಾಡಲಾಗುವುದು.
- ❖ ಮಕ್ಕಳ ಕಾರ್ಯಕ್ರಮಗಳನ್ನು **"ಧ್ವನಿಸುರುಳಿ"** ಮೂಲಕ ಪ್ರಚಾರ ಮಾಡಲಾಗುತ್ತದೆ.
- ❖ ಸಾರ್ವಜನಿಕ ಶಿಕ್ಷಣ ಇಲಾಖೆ, ಮೈಸೂರು ಸೇಲ್ಸ್ ಇಂಟರ್ ನ್ಯಾಷನಲ್ ಲಿಮಿಟೆಡ್, ನವಕರ್ನಾಟಕ ಪಬ್ಲಿಕೇಶನ್-ಇವರಿಂದ ಪುಸ್ತಕ ಪ್ರದರ್ಶನ,
- ❖ ಚನ್ನಪಟ್ಟಣ ಬೊಂಬೆಗಳ ಪ್ರದರ್ಶನ,
- ❖ ಮಹಿಳಾ ಮತ್ತುಮಕ್ಕಳ ಅಭಿವೃದ್ಧಿ ಇಲಾಖೆ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ಕೇಂದ್ರ:
- ❖ ಭಾರತೀಯ ಜೀವ ವಿಮಾ ನಿಗಮದಿಂದ ಮಕ್ಕಳ ಯೋಜನೆಗಳ ಬಗ್ಗೆ ಮಾಹಿತಿ ಕೇಂದ್ರ.
- ❖ ಕಿಡ್ಸ್ ಕಿನ್ ಸಲ್ಯೂಷನ್ಸ್-ಶಾಲಾ ಪೂರ್ವ ಶಿಕ್ಷಣ ಆಟಿಕೆಗಳ ಪ್ರದರ್ಶನ
- ❖ ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರದಿಂದ ಮಾಹಿತಿ ಕೇಂದ್ರ
- ❖ ಅರಣ್ಯ ಮತ್ತು ಪರಿಸರ ಇಲಾಖೆಯಿಂದ ಮಾರಾಟ ಮಳಿಗೆ
- ❖ ಕಾಣೆಯಾದ ಮಕ್ಕಳ ಬ್ಯೂರೋ
- ❖ ಕೆ.ಎಂ.ಎಫ್ ನಿಂದ ಮಾರಾಟ ಮಳಿಗೆ
- ❖ ಕಾರ್ಮಿಕ ಇಲಾಖೆಯಿಂದ ಮಾಹಿತಿ ಕೇಂದ್ರ
- ❖ ಅಕ್ಷರ ಫೌಂಡೇಶನ್‌ನಿಂದ ಮಾಹಿತಿ ಕೇಂದ್ರ
- ❖ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಮಕ್ಕಳಿಗಾಗಿ ಇರುವಂತಹ ಯೋಜನೆಗಳ ಮಾಹಿತಿ ಕೇಂದ್ರ
- ❖ ತೋಟಗಾರಿಕೆ ಇಲಾಖಾವತಿಯಿಂದ ವಿಜೃಂಭಣೆಯ ಪುಷ್ಪ ಪ್ರದರ್ಶನ, ವೆಪನ್ ಮತ್ತು ಬ್ಯಾಂಡ್ ಶೋ ಕೂಡ ಆಯೋಜಿಸಲಾಗಿದೆ.
- ❖ ಸುಮಾರು 10000ದಿಂದ 15000 ಮಕ್ಕಳು ತಮ್ಮ ಪೋಷಕರೊಂದಿಗೆ ಭಾಗವಹಿಸಿ ಕಾರ್ಯಕ್ರಮದಲ್ಲಿ ನಲಿದು ಆನಂದಿಸಲಿದ್ದಾರೆ. ಸದರಿ ಕಾರ್ಯಕ್ರಮಕ್ಕೆ ಎಲ್ಲರಿಗೂ ಉಚಿತ ಪ್ರವೇಶವನ್ನು ಕಲ್ಪಿಸಲಾಗಿದೆ.
- ❖ ಕಾರ್ಯಕ್ರಮದ ಸ್ಥಳಕ್ಕೆ ಬೆಂಗಳೂರು ನಗರ ಮತ್ತು ಗ್ರಾಮಾಂತರ ಪ್ರದೇಶಗಳಿಂದ ಮಕ್ಕಳ ಹಾಗೂ ಪೋಷಕರ ಪ್ರಯಾಣದ ಸೌಲಭ್ಯಕ್ಕಾಗಿ ವಿಶೇಷ ಬಸ್‌ಗಳ ವ್ಯವಸ್ಥೆಯನ್ನು ಮಾಡಲು ಬಿ.ಎಂ.ಟಿ.ಸಿ ಸಾರಿಗೆ ಸಂಸ್ಥೆಯವರು ಒಪ್ಪಿರುತ್ತಾರೆ.
- ❖ ಸ್ವಂತ ವಾಹನದಲ್ಲಿ ಬರುವವರಿಗೆ ವಾಹನ ನಿಲುಗಡೆಗೆ ಸ್ಥಳಾವಕಶ ಕಲ್ಪಿಸಲು ಕ್ರಮವಹಿಸಲಾಗಿದೆ.
- ❖ ಮಕ್ಕಳ ದಿನಾಚರಣೆ ಕಾರ್ಯಕ್ರಮವನ್ನು ಬೆಂಗಳೂರು ನಗರದಲ್ಲಿ ಮಾತ್ರವಲ್ಲದೆ ರಾಜ್ಯಾದ್ಯಂತ ಎಲ್ಲಾ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಹಮ್ಮಿಕೊಳ್ಳಲಾಗುತ್ತಿದೆ.
- ❖ ನವೆಂಬರ್ ಮಾಹೆಯಲ್ಲಿ ಮಕ್ಕಳ ಗ್ರಾಮಸಭೆಯನ್ನು ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಪಂಚಾಯತ್ ರಾಜ್ ಗ್ರಾಮೀಣ ಅಭಿವೃದ್ದಿ ಇಲಾಖೆಯಿಂದ ಆಯೋಜಿಸಲಾಗಿದೆ.

ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಮಕ್ಕಳು ನಲಿದು ಕುಣಿದು ಕುಪ್ಪಳಿಸಲು ಅವಕಾಶ ಮಾಡಲಾಗಿದೆ.

***